<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ</u>

<u>ಅಪರಾಧ ಮೊಕದ್ದಮೆ ಸಂಖ್ಯೆ: **297/2016**</u>

**ಪಿರ್ಯಾದಿ :** ಠಾಣಾಧಿಕಾರಿಗಳು, ಸವಣೂರ ಪಿ.ಎಸ್.,

<u>ವಿರುದ್ಧ</u>

ಆರೋಪಿ ಸಲೀಂಅಹ್ಮದ ಉರ್ಫ ನನ್ನೆಮಿಯಾ ತಂದೆ ಖಾಜಾಮೋದಿನ ಬನ್ನೂರ
ವಯಾಃ 38 ವರ್ಷ,
ಸಾ : ಸವಣೂರ ಲಾಲಸಗಟ್ಟಿ ಓಣಿ ತಾಃ ಸವಣೂರ ಜಿಃ ಹಾವೇರಿ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ಅಡಿ ಆರೋಪಿತನ ಹೇಳಿಕೆ</u>

<u>ಪ್ರಶ್ನೆ-**1**</u> **:** ಸಾಕ್ಷಿದಾರರು ನ್ಯಾಯಾಲಯದಲ್ಲಿ ಹೇಳಿದ ಸಾಕ್ಷ್ಯ ಗೊತ್ತಿದೆಯಾ ?

ಉತ್ತರ **:**

<u>ಪ್ರಶ್ನೆ-**2**</u> **:** ಫ್ರಾಸಾ.1 ಚಂದ್ರಕಲಾ ಸುದರ್ಶನ ಜೆ ತಮ್ಮ ಸಾಕ್ಷದಲ್ಲಿ, ದಿನಾಂಕಃ 09.07.2015 ರಂದು ಮುಂಜಾನೆ 10.45 ಗಂಟೆಗೆ ಚಾಸಾ-4 ರವರು ನನಗೆ ಕರೆ ಮಾಡಿ ಅವರ ಕಚೇರಿಗೆ ಕರೆಯಿಸಿಕೊಂಡಿದ್ದರು. ತಾನು ಅವರ ಕಚೇರಿಗೆ ಹೋದೆನು. ಸವಣೂರಿನ ಲಾಲಶಾಕಟ್ಟೆಯಲ್ಲಿರುವ ಬನ್ನೂರ ಅವರ ಕ್ಲಿನಿಕ್ ಗೆ ಹೋಗಿ ಪರೀಕ್ಷೆ ಮಾಡೋಣ ಎಂದು ಚಾಸಾ-4 ರವರು ತನಗೆ ಹೇಳಿದರು. ಅಲ್ಲಿ ಸದರಿ ಕ್ಲಿನಿಕ ಕೆಪಿಎಂಇ ಕಾಯ್ದೆ ಯಡಿಯಲ್ಲಿ ನೊಂದಣಿ ಆಗಿದೆಯೋ ಹೇಗೆ ಮತ್ತು ನಕಲಿ ವೈದ್ಯರು ಇರುತ್ತಾರೋ ಹೇಗೆ ಎಂದು ಪರೀಕ್ಷೆ ಮಾಡಲು ತಾವೆಲ್ಲರೂ ಹೋಗಿದ್ದೆವು. ತನ್ನ ಜೊತೆಗೆ ಚಾಸಾ-1,4,6 ರಿಂದ 8 ಹಾಗೂ ಇಬ್ಬರು ಪೋಲಿಸ್ ಪೇದೆಗಳು ಇದ್ದರು. ತಾವೆಲ್ಲರೂ ಕೂಡಿ ಲಾಲಶಾಕಟ್ಟೆಯ ಬನ್ನೂರ ಆಸ್ಪತ್ರೆಗೆ ಹೋದಾಗ ಸದರಿ ಆಸ್ಪತ್ರೆಯಲ್ಲಿ ಮರಡಿ ಎನ್ನುವ ವೈದ್ಯರು ಇದ್ದರು. ಮರಡಿ ವೈದ್ಯರಿಗೆ ಚಾಸಾ-4 ರವರು ಎಷ್ಟು ಜನರಿಗೆ ಔಷದೋಪಚಾರವನ್ನು ಮಾಡಿರುತ್ತಿರಿ ಎಂದು ಕೇಳಿರುತ್ತಾರೆ. ಬನ್ನೂರ ಆಸ್ಪತ್ರೆಯಲ್ಲಿ ತಾವು ಹೋದಾಗ ಒಬ್ಬ 60 ವರ್ಷದ ಮಹಿಳಾ ರೋಗಿ ಇದ್ದರು. ಚಾಸಾ-4 ರವರು ಆರೋಪಿಯನ್ನು ಕರೆಸಿ ಕ್ಲಿನಿಕ್ ನಡೆಸಲು ಪರವಾನಿಗೆ ಇರುವ ಬಗ್ಗೆ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿರುತ್ತಾರೆ. ಚಾಸಾ-4 ರವರ ಕಚೇರಿಯ ಸಿಬ್ಬಂದಿ ಇಬ್ಬರು ಜನ ಇದ್ದರು. ಆ ದಿವಸ ಬನ್ನೂರ ಆಸ್ಪತ್ರೆಗೆ ಹೋದಾಗ ಮುಂಜಾನೆ 11.00 ಗಂಟೆ ಆಗಿತ್ತು. ಸದರಿ ಆಸ್ಪತ್ರೆಯಲ್ಲಿ ಔಷಧಗಳನ್ನು ಚಾಸಾ-1,4,6 ರಿಂದ 8 ರವರು ಮತ್ತು ಇನ್ನೂ ಇಬ್ಬರು ಚಾಸಾ-4 ರವರ ಕಚೇರಿಯ ಸಿಬ್ಬಂದಿಗಳು ಇದ್ದರು. ಇವರೆಲ್ಲರ ಸಮಕ್ಷಮ ಔಷಧಗಳನ್ನು ಜಪ್ತಪಡಿಸಿಕೊಂಡಿರುತ್ತೇವೆ. ಮರಡಿ ವೈದ್ಯರು ಆರೋಪಿತನ ಕ್ಲಿನಿಕ್ ನಲ್ಲಿ ಕೆಲಸ ಮಾಡುತ್ತೇನೆ ಎಂದು ತಮಗೆ ಹೇಳಿರುತ್ತಾರೆ. ಒಂದು ಆಸ್ಪತ್ರೆಯು ಕೆ ಪಿ ಎಂ ಇ ಕಾಯ್ದೆ ಅಡಿಯಲ್ಲಿ

ನೊಂದಣಿ ಆಗಬೇಕಾದರೆ ಆಸ್ಪತ್ರೆಯ ಬ್ಲ್ಯೂಪ್ರಿಂಟನ್ನು ತಾವು ಪಡೆಯುತ್ತೇವೆ. ಸದರಿ ಆಸ್ಪತ್ರೆ ನೊಂದಣಿ ಮಾಡಿಸಲು ಯೋಗ್ಯ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಪರಿಶೀಲನೆ ಮಾಡಿ ಡಿ ಎಚ್ ಓ ಅವರು ಪರವಾನಿಗೆಯನ್ನು ನೀಡುತ್ತಾರೆ. ತಾನು ಹಾಗೂ ಚಾಸಾ-1 ರವರು ಸದರಿ ಆಸ್ಪತ್ರೆಯಲ್ಲಿ ದೊರೆತ ಔಷಧಗಳನ್ನು ಪಾರ್ಮಾಪಿಪ್ಪಿಗಳು ಲೆಕ್ಕ ಹಾಕಿ ಶೀಲು ಮಾಡಿ ಅರಗ ಹಚ್ಚಿ ತಮ್ಮ ಸಮಕ್ಷಮ ಪೋಲಿಸರಿಗೆ ಸದರಿ ವಸ್ತುಗಳನ್ನು ಹಸ್ತಾಂತರ ಮಾಡಿರುತ್ತೇವೆ. ಈ ಕುರಿತು ತಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ :

<u>ಪ್ರಶ್ನೆ-**3**</u> **:** ಫ್ರಾಸಾ.2 ಡಾಃ ಭಾಗಿರಥಿ ನಿಂಗಪ್ಪ ಮೆಡ್ಲೇರಿ ತಮ್ಮ ಸಾಕ್ಷದಲ್ಲಿ, ದಿನಾಂಕಃ 09.07.2015 ರಂದು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಚಾಸಾ-4 ಮತ್ತು 5 ರವರು ದೂರವಾಣಿ ಮೂಲಕ ತನ್ನನ್ನು ಸಂಪರ್ಕಿಸಿ ಸವಣೂರಿನ ಲಾಲಸಾ ಕಟ್ಟೆಯಲ್ಲಿ ಅನಧಿಕೃತವಾಗಿ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದಾರೆ ಎಂದು ಹಾಗೂ ಸಾರ್ವಜನಿಕರಿಂದ ದೂರುಗಳು ಬಂದಿದ್ದು ತಕ್ಷಣ ಸ್ಥಳಕ್ಕೆ ಬರುವಂತೆ ತನಗೆ ದೂರವಾಣಿ ಮೂಲಕ ಸೂಚಿಸಿದರು. ನಂತರ ತಾನು ಹಾವೇರಿಯಿಂದ ಸವಣೂರಿನ ತಾಲೂಕ ಆಸ್ಪತ್ರೆಗೆ ಹಾಗೂ ಉಪ ವಿಭಾಗಾಧಿಕಾರಿ ಕಚೇರಿಗೆ ಬೆಳಿಗ್ಗೆ ಸುಮಾರು 11.40 ರ ವೇಳೆಗೆ ಭೇಟಿಯಾಗಿ ಈ ವಿಷಯದ ಬಗ್ಗೆ ಚಾಸಾ-4 ಮತ್ತು 5 ರವರ ಬಳಿ ಚರ್ಚಿಸಿದೆವು. ಆಪಾದನೆ ಬಂದ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಮಾತ್ರ ಅನಧೀಕೃತವಾಗಿ ವೈದ್ಯಕೀಯ ವೃತ್ತಿ ಮಾಡುವವರ ವಿರುದ್ದ ಕೆ ಪಿ ಎಂ ಇ ಕಾಯ್ದೆ ಅಡಿ ಪ್ರಕರಣ ದಾಖಲಿಸಲು ಅಧಿಕಾರ ಇರುವುದರಿಂದ ತಾನು ಚಾಸಾ-4 ರಿಂದ 8 ಸೇರಿ ಲಾಲಸಾ ಕಟ್ಟೆಯಲ್ಲಿರುವ ಡಾಃ ಸಲೀಂ ಅಹಮ್ಮದ ರವರ ಕ್ಲಿನಿಕ ಗೆ ಮದ್ಯಾಹ್ಣ 12.00 ಗಂಟೆಗೆ ಹೋಗಿ ದಾಳಿ ಮಾಡಿದೆವು. ಹಾಗೂ ತಮ್ಮ ಜೊತೆಗೆ ಇಬ್ಬರು ಪಂಚರನ್ನು ಹಾಗೂ ಪೋಲಿಸರನ್ನು ಕರೆದುಕೊಂಡು ಹೋಗಿದ್ದೆವು. ಸದರಿ ಕ್ಲಿನಿಕ್ ನಲ್ಲಿ ಚಾಸಾ-9 ರವರು ಮತ್ತು ಕೆಲವು ರೋಗಿಗಳು ಹಾಗೂ ಆರೋಪಿ ಇದ್ದರು. ತಾನು ನ್ಯಾಚುರೋಪತಿ ಓದಿದ್ದು ಚಾಸಾ-9 ರವರು ತನ್ನ ಕ್ಲಿನಿಕ ನಲ್ಲಿ ವೈದ್ಯಕೀಯ ವೃತ್ತಿ ಮಾಡುತ್ತಾರೆಂದು ತಿಳಿಸಿದರು. ತಾವೆಲ್ಲರೂ ಸದರಿ ಕ್ಲಿನಿಕನಲ್ಲಿ ಒಳಗೆ ಹೋಗಿ ಪರೀಶಿಲಿಸಲು ಅಲ್ಲಿ 3 ಕೋಣೆಗಳು ಇದ್ದವು. ಒಂದು ಕೋಣೆಯಲ್ಲಿ ಪಿಠೋಪಕರಣಗಳು ಇನ್ನೊಂದು ರೂಮಿನಲ್ಲಿ ಔಷಧಿ ಹಾಗೂ ಲ್ಯಾಬೊರೆಟರಿ ಇದ್ದು, ಮತ್ತೊಂದು ರೂಮಿನಲ್ಲಿ ಸ್ಟೊರೇಜ್ ಮಾಡಲು ಬಳಸುತ್ತಿದ್ದರು. ಪಿಠೋಪಕರಣ ಇದ್ದ ರೂಮಿನಲ್ಲಿ ರೋಗಿಗಳನ್ನು ತಪಾಸಣೆ ಮಾಡಲು ವ್ಯವಸ್ಥೆ ಇತ್ತು. ಸಿಕ್ಕ ಔಷಧಿಗಳಲ್ಲಿ ಪರೀಶೀಲಿಸಲಾಗಿ ಅವುಗಳಲ್ಲಿ 48 ವಿವಿಧ ಔಷಧಿಗಳು ಹಾಗೂ ವೈದ್ಯಕೀಯ ಲ್ಯಾಬಗೆ ಬಳಸುವಂತಹ ದ್ರವಗಳು ಇದ್ದವು. ನಂತರ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಅವುಗಳನ್ನೆಲ್ಲಾ ಜಪ್ತಪಡಿಸಿಕೊಂಡು ಪ್ರತ್ಯೇಕವಾಗಿ ಸೀಲು ಮಾಡಿದ್ದೇವೆ. ಸದರಿಯವರು ನಕಲಿ

ವೈದ್ಯರೆಂದು ಕಂಡು ಬಂದಿದ್ದು ಹಾಗೂ ಜನರಿಗೆ ವೈದ್ಯರೆಂದು ನಂಬಿಸಿ ಮೋಸ ಮಾಡುತ್ತಿದ್ದು ಆದ್ದರಿಂದ ಆರೋಪಿಯ ವಿರುದ್ಧ ಕೆ ಪಿ ಎಂ ಇ ಕಾಯ್ದೆ ಅಡಿಯಲ್ಲಿ ಠಾಣೆಗೆ ದೂರನ್ನು ನೀಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉತ್ತರ :**

<u>ಪ್ರಶ್ನೆ-**4**</u> **:** ಫ್ರಾಸಾ.3 ಫಕ್ಕೀರಪ್ಪ ಚನ್ನಬಸಪ್ಪ ಅರಳಿ ತಮ್ಮ ಸಾಕ್ಷದಲ್ಲಿ, ದಿನಾಂಕಃ 09-07-2015 ರಂದು ಸವಣೂರಿನ ಲಾಲಶಾಕಟ್ಟಿಯಲ್ಲಿರುವ ಸಲೀಂ ಕ್ಲಿನಿಕದಲ್ಲಿ ಸಹಿ ಮಾಡಿದ್ದೇನು. ಆ ದಿನ ತಾನು, ಚಾಸಾ-1,3 ರಿಂದ 8 ಸದರಿ ಜಾಗಕ್ಕೆ ಹೋಗಿದ್ದೇವು. ಅಲ್ಲಿಗೆ ಚಾಸಾ-4 ರವರು ತಮಗೆ ಬರಲು ಹೇಳಿದ್ದರು. ಅಲ್ಲಿ 48 ವಿವಿಧ ನಮೂನೆಯ ಔಷಧಿ, ಉಪಕರಣಗಳನ್ನು ಜಪ್ತಿಪಡಿಸಿಕೊಂಡರು. ತಾವು ಅಲ್ಲಿಗೆ ಹೋದಾಗ ಬೆಳಿಗ್ಗೆ 11-45 ಗಂಟೆಯಾಗಿತ್ತು. ಅಲ್ಲಿ ಆಪಾದಿತನು ಮೇಹರುನಿಸ್ಸಾ ಎನ್ನುವರಿಗೆ ಚಿಕಿತ್ಸೆ ನೀಡುತ್ತಿದ್ದನು. ಚಾಸಾ-1 ಮತ್ತು 4 ರವರು ಅಪಾದಿತನಿಗೆ ತನ್ನ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ವಿಚಾರಿಸುತ್ತಿದ್ದರು. ಆ ದಿನ 3-30 ರಿಂದ 4-30 ಗಂಟೆಯವರೆಗೆ ಪಂಚನಾಮೆ ಮಾಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

**ಉತ್ತರ :**

<u>ಪ್ರಶ್ನೆ-**5**</u> **:** ಫ್ರಾಸಾ.4 ಡಾಃ ಸಿದ್ದು ಪರಪ್ಪ ಹುಲ್ಲೋಳ್ಳಿ ತಮ್ಮ ಸಾಕ್ಷದಲ್ಲಿ, ದಿಃ 09-07-2015 ರಂದು ತಮ್ಮ ಕಚೇರಿಗೆ ಒಂದು ದೂರು ಬಂದಿದ್ದು, ಆ ದೂರು ಆರೋಗ್ಯಧಿಕಾರಿಗಳಿಗೆ ಸಂಬಂದ ಪಟ್ಟಿದ್ದರಿಂದ ತಾನು ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾ. ಚಂದ್ರಕಲಾ ಅವರನ್ನು ದೂರವಾಣಿ ಮುಖಾಂತರ ಸಂಪರ್ಕಸಿ ದೂರಿನ ವಿಷಯ ಚರ್ಚಿಸಲು, ಸದರಿಯವರು ಸಂಬಧಿಸಿದ ದೂರಿಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳು ಅಧಿಕಾರವನ್ನು ಹೊಂದಿರುತ್ತಾರೆ ಆದ್ದರಿಂದ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸದರಿ ದೂರಿನ ಕುರಿತು ವಿವರ ತಿಳಿಸುವುದಾಗಿ ಹೇಳಿರುತ್ತಾರೆ. ನಂತರ ಜಿಲ್ಲಾ- ಆರೋಗ್ಯ ಅಧಿಕಾರಿಗಳು ಸವಣೂರಿಗೆ ಬಂದಿರುತ್ತಾರೆ. ತಾನು, ಜಿಲ್ಲಾ ಆರೋಗ್ಯ ಅಧಿಕಾರಿಗಳ ಜೊತೆ ಮತ್ತು ತಾಲೂಕ ಆರೋಗ್ಯ ಅಧಿಕಾರಿಗಳ ಜೊತೆ ಚರ್ಚಿಸಿ ಆರೋಪಿಯ ಬಾತ್ಮಿ ಸ್ಥಳಕ್ಕೆ ಹೋಗಿರುತ್ತನೆ. ಅಲ್ಲಿ ಹೋಗಿ ವಿಚಾರಿಸಲಾಗಿ ಅಲ್ಲಿ ಆಸ್ಪತ್ರೆ ನಿರ್ಮಾಣ ಮಾಡಿಕೊಂಡಿದ್ದರು ಮತ್ತು ವೈದ್ಯರು ಅಂತ ಹೇಳಿಕೊಂಡು ಒಬ್ಬರು ಅವರ ಹೆಸರು ಸಲೀಮ್ ಅಹ್ಮದ ಬನ್ನೂರ ಎಂದು ಅವರು ಇದ್ದರು. ಅವರು ತಾವು ಹೋದ ಸಮಯದಲ್ಲಿ ಒಬ್ಬ ರೋಗಿಗೆ ಉಪಚಾರ ನೀಡುತ್ತಿದ್ದರು. ತಾವು ಅದನ್ನು ನೋಡಿರುತ್ತೇವೆ. ತಾವು ಆರೋಪಿಗೆ ತಾವು ವೈದ್ಯರು ಅಂತಾ ತೋರಿಸಲು ಪ್ರಮಾಣ ಪತ್ರ ಗಳನ್ನು ಹಾಜರು ಪಡಿಸುವಂತೆ ತಿಳಿಸಿದೆವು. ನಂತರ ಅಲ್ಲಿ ಇರತಕ್ಕಂತಹ ಎಲ್ಲ ವಸ್ತುಗಳನ್ನು

ತಾಲೂಕ ಆರೋಗ್ಯ ಅಧಿಕಾರಿಗಳು ಜಪ್ತಿ ಪಡಿಸಿಕೊಂಡು ಜಪ್ತಿ ಪಂಚನಾಮೆ ಮಾಡಿರುತ್ತಾರೆ. ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಈ ಕುರಿತು ತಾನು ಪೋಲಿಸರಿಗೆ ದಿಃ 12-07-2015 ರಂದು ಹೇಳಿಕೆ ನೀಡಿರುತ್ತೇನೆ. ಸದರ ಪಂಚನಾಮೆಯನ್ನು ಸಾಯಂಕಾಲ 03.00 ಗಂಟೆಯಿಂದಾ 4.30, 05.00 ಗಂಟೆಯವರೆಗೆ ಮಾಡಿರುತ್ತಾರೆ. ಸದರಿ ಆರೋಪಿ ನಿರ್ಮಿಸಿರುವ ಆಸ್ಪತ್ರೆಯಲ್ಲಿ 3 ರೂಮಗಳು ಇರುತ್ತವೆ. ಡಾ. ಸವಿತಾ ಮುರಡಿ ಇವರು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಾರೆ ಅಂತಾ ಹೇಳಿದನು. ಆಗ ಆರೋಗ್ಯ ಅಧಿಕಾರಿಗಳು ಡಾ. ಸವಿತಾ ಮುರಡಿ ಇವರಿಗೆ ಕರೆಯಿಸಿದ್ದು ಮತ್ತು ಈ ಕುರಿತು ವಿಚಾರಿಸಲಾಗಿ ಅವರು ತಾವು ಸದರಿ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ನೀಡುವುದಿಲ್ಲ ಆರೋಪಿ ಸುಳ್ಳು ಹೇಳುತ್ತಿದ್ದಾನೆ ಅಂತಾ ತಿಳಿಸಿದರು. ತಾವು ದಾಳಿ ಮಾಡಲು ಹೋದಾಗ ಸಮಯ 11.45 ರಿಂದ 12.00 ಗಂಟೆಯಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ :

<u>ಪ್ರಶ್ನೆ</u>-**<u>6</u> :** ಫ್ರಾಸಾ.5 ರಾಮಕೃಷ್ಣ ಶಿವಾಜಿರಾವ ಘಾಟಗೆ ತಮ್ಮ ಸಾಕ್ಷದಲ್ಲಿ, ದಿಃ 09-07-2015 ರಂದು ಚಾಸಾ-1 ಪ್ರಭಾರ ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ. ಬಾಗೀರಥಿ ಇವರು ತಾಲೂಕ ಆಸ್ಪತ್ರೆ ಸವಣೂರಿಗೆ ಬಂದಿದ್ದರು ಆಗ ತಾಲೂಕಾ ಆರೋಗ್ಯ ಅಧಿಕಾರಿಗಳು ನನ್ನನ್ನು ಕಚೇರಿಗೆ ಕರೆಯಿಸಿದ್ದರು. ತನ್ನೊಂದಿಗೆ ಚಾಸಾ-7 ಮತ್ತು 8 ರವರನ್ನು ಸಹ ಕರೆಯಿಸಿದ್ದರು. ತಮಗೆ ಲಾಲಾಸಾಕಟ್ಟಿ ಓಣಿಯಲ್ಲಿ ಸಲಿಂ ಎಂಬುವವರು ಅನಧಿಕೃತವಾಗಿ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ ಹೋಗಿ ಬರೋಣ ಅಂತಾ ತಿಳಿಸಿದರು. ನಂತರ ತಾವು ಅವರ ಜೊತೆ ಮತ್ತು ಕಂದಾಯ ಇಲಾಖೆಯ ಇಬ್ಬರನ್ನು ಅಂದರೆ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಹೋಗಿರುತ್ತೇವೆ. ಆರೋಪಿ ಅನಧಿಕೃತವಾಗಿ ಆಸ್ಪತ್ರೆ ನಡೆಸುತ್ತಿದ್ದು ಮತ್ತು ವೈದ್ಯನಲ್ಲದಿದ್ದರು ವೈದ್ಯಕೀಯ ವೃತ್ತಿ ಮಾಡುತ್ತಿದ್ದ ಮತ್ತು ಮಾತ್ರೆ ಮತ್ತು ಇಜೆಂಕ್ಷನಗಳನ್ನು ಕೊಡುತ್ತಿದ್ದ ಅಂತಾ ತಿಳಿಸಿರುತ್ತಾರೆ. ತಾವು ಅಲ್ಲಿಗೆ ಹೋದಾಗ ಮೆಹರೂನಿಸಾ ವಿಜಾಪುರ ಎಂಬ 60 ವರ್ಷದ ಮಹಿಳೆ ಚಿಕಿತ್ಸೆ ಪಡೆಯಲು ಬಂದಿದ್ದರು. ತಾವು ಚಾಸಾ-1, ಚಾಸಾ-5 ಹಾಗೂ ಚಾಸಾ-2, 3 ಮತ್ತು ನಾವು 3 ಜನ ಪಾರ್ಮಸಿಸ್ಟಗಳು ಕೂಡಿ ಸ್ಥಳಕ್ಕೆ ಹೋಗಿರುತ್ತೆವೆ. ಆರೋಪಿ ಚಾಸಾ-10 ಮೆಹರೂನಿಸಾ ಇವರಿಗೆ ಚಿಕಿತ್ಸೆ ಮಾಡುತ್ತಿದ್ದ. ಆಗ ಚಾಸಾ-1 ರವರು ಆರೋಪಿಗೆ ವೈದ್ಯಕೀಯ ವೃತ್ತಿ ಕುರಿತು ಪ್ರಮಾಣ ಪತ್ರ ಕೇಳಿದಾಗ ಇಲ್ಲ ಅಂತಾ ತಿಳಿಸಿರುತ್ತಾನೆ ಆರೋಪಿ ತಾನು ಸದರಿ ಆಸ್ಪತ್ರೆಯ ಮೇಲ್ವಿಚಾರಣೆ ಮಾಡುತ್ತೇನೆ, ಚಿಕಿತ್ಸೆಯನ್ನು ಡಾ. ಸವಿತಾ ಮುರಡಿ ಇವರು ನೀಡುತ್ತಾರೆ ಅಂತಾ ಹೇಳಿರುತ್ತಾನೆ. ಸದರಿ ಆಸ್ಪತ್ರೆಯನ್ನು ಚಾಸಾ-1 ರವರು ಪರೀಶಿಲಿಸಿದಾಗ ಕೆಲವು ಮೆಡಿಸನ್‌ಗಳು ಸಿಕ್ಕಿರುತ್ತೆವೆ, ಔಷಧಿಗಳು, ಇಂಜೆಕ್ಷನಗಳು, ಲ್ಯಾಬ್ ಕೆಮಿಕಲ್ಸಗಳು ಸಿಕ್ಕಿರುತ್ತವೆ. ನಂತರ ಚಾಸಾ-1 ರವರು ಅಲ್ಲಿ ಇದ್ದ ಔಷದ, ಇಂಜೆಕ್ಷನಗಳನ್ನು ಸಿಜ

ಮಾಡಿರುತ್ತಾರೆ, ತಾವು ಚಾಸಾ-1 ರವರ ಆದೇಶದಂತೆ ಸದರಿ ಇಂಜೆಕ್ಷನ ಮತ್ತು ಔಷಧಿಗಳನ್ನು ಲಕೋಟೆಯಲ್ಲಿ ಹಾಕಿ ಸಿಲ್ ಮಾಡಿರುತ್ತೇವೆ. ಅವುಗಳನ್ನು ಸಿಜ ಮಾಡಿದಾಗ 12.00 ಗಂಟೆಯಾಗಿತ್ತು. ಪಂಚನಾಮೆಯನ್ನು 03.00 ಗಂಟೆಯಿಂದ 4.30 ರವರೆಗೆ ಮಾಡಿರುತ್ತಾರೆ. ಈ ಕುರಿತು ತಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ :

ಪ್ರಶ್ನೆ-**7** : ಫ್ರಾಸಾ.6 ರವಿ ಬಸಪ್ಪ ಮಾಚಕನವರ ತಮ್ಮ ಸಾಕ್ಷದಲ್ಲಿ, ಜಿಲ್ಲಾ ಆರೋಗ್ಯ ಅಧಿಕಾರಿಗಳು ದಿನಾಂಕಃ 09.07.2015 ರಂದು ಸವಣೂರಿಗೆ ಬಂದಿದ್ದರು. ತಾನು, ಚಾಸಾ-1, ತಾಲೂಕಾ ಆರೋಗ್ಯ ಇಲಾಖೆ ಅಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಸವಣೂರು, ಆರೋಗ್ಯ ಇಲಾಖೆಯ ಸಿಬ್ಬಂದಿಯವರು, ಸಲೀಂಅಹಮ್ಮದ ಇವರ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ಆರೋಪಿ ಸಲೀಂ ಅಹಮ್ಮದ ಬನ್ನೂರು ಇತ ನಕಲಿ ವೈದ್ಯ ಅಂತಾ ಕಂಡು ಬಂದಿರುತ್ತದೆ. ಸದರಿ ಚಾಸಾ-1, 4,5 ರವರು ಪರಿಶೀಲನೆ ಮಾಡಿ ಆಸ್ಪತ್ರೆಯನ್ನು ಶೀಲು ಮಾಡಿದರು. ತಮ್ಮ ಸಮಕ್ಷಮ ವೈದ್ಯಕೀಯ ಸಾಮಗ್ರಿಗಳನ್ನು ಶೀಲು ಮಾಡಿ ಸಹಿ ಪಡೆದಿರುತ್ತಾರೆ. ತನ್ನ ಸಮಕ್ಷಮ ಜಪ್ತ ಮಾಡಿದ ಸಾಮಗ್ರಿಗಳು ಇರುತ್ತವೆ. ಪಂಚನಾಮೆಯನ್ನು 11.30 ರಿಂದ 4.30 ರವರೆಗೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ :

<u>ಪ್ರಶ್ನೆ-**8**</u> **:** ಫ್ರಾಸಾ.7 ಡಾಃ ಸವಿತಾ ಪ್ರಕಾಶ ಮುರಳಿ ತಮ್ಮ ಸಾಕ್ಷದಲ್ಲಿ, ಸುಮಾರು 7 ವರ್ಷದ ಹಿಂದೆ ಟಿ ಎಚ್ ಓ ಅವರು ತನ್ನನ್ನು ಕರೆದಿದ್ದರು ಈ ಕುರಿತು ಕೇಳಿದಾಗ ತಾನು ಆರೋಪಿ ಜೊತೆ ಕ್ಲಿನಿಕನಲ್ಲಿ ಕೆಲಸ ಮಾಡುತ್ತಿಲ್ಲ ಅಂತಾ ಹೇಳಿದ್ದೇನೆ, ಮತ್ತು ಟಿ ಎಚ್ ಓ ಅವರಿಗೆ ಲಿಖಿತವಾಗಿ ಬರೆದುಕೊಟ್ಟಿರುತ್ತೇನೆ. ಈ ಕುರಿತು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ **:**

<u>ಪ್ರಶ್ನೆ-**9**</u> **:** ಫ್ರಾಸಾ.8 ಮಹೇಶಗೌಡ ಗೌಡಪ್ಪಗೌಡ ಪಾಟೀಲ ತಮ್ಮ ಸಾಕ್ಷದಲ್ಲಿ, ದಿನಾಂಕಃ 29.08.2015 ರಂದು ಚಾಸಾ-12 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನತನಿಖೆಗಾಗಿ ಪಡೆದುಕೊಂಡು, ಅದೇ ದಿನ ಚಾಸಾ-10 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಚಾಸಾ-12 ರವರು ತಮ್ಮ ಠಾಣೆಯಲ್ಲಿ ಎ ಎಸ್ ಐ ಆಗಿದ್ದರು. ಅವರು ಮರಣ ಹೊಂದಿರುತ್ತಾರೆ. ಚಾಸಾ-12 ರವರು, ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ. ಅವರು ಚಾಸಾ-4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ?

ಉತ್ತರ **:**

ಪ್ರಶ್ನೆ-**10:** ನೀವು ನಿಮ್ಮ ಪರವಾಗಿ ಸಾಕ್ಷ್ಯ ಮಾಡಿಸುತ್ತೀರಾ ?

ಉತ್ತರ **:**

<u>ಪ್ರಶ್ನೆ-**11**</u>**:**ನೀವು ನಿಮ್ಮ ಪರವಾಗಿ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ?

ಉತ್ತರ **:**

<u>ಪ್ರಶ್ನೆ-**12**</u> **:** ನೀವು ಏನಾದರೂ ಹೇಳುವುದು ಇದೆಯಾ ?

ಉತ್ತರಃ

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

Sd/-

**(ಶ್ರೀ. ಶ್ರೇಯಾಂಶ ದೊಡ್ಡಮನಿ)**
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು
ಸವಣೂರ.

ದಿನಾಂಕ : 12.12.2022
ಆರೋಪಿತನ ಸಹಿ